C.R.P.67
Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ ನಂ.73/2022

ದಿನಾಂಕಃ 17.07.2023 ರಂದು ಪ್ರಮಾಣ ವಚನ ಬೋದಿಸಲಾಗಿದೆ
ಸಿ. ಡಬ್ಲ್ಯೂ :2 ಪಿ. ಡಬ್ಲ್ಯೂ :1

| | |
|---|---|
| ಸಾಕ್ಷಿದಾರರ ಹೆಸರು | ಮಹದೇವಮ್ಮ |
| ಗಂಡನ ಹೆಸರು | ಶೇಖರ್ |
| ವಯಸ್ಸು | 50 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸ | ಕಿರಗಸೂರು, ಮಳವಳ್ಳಿ ತಾ |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

1) ಆರೋಪಿತ ಗೊತ್ತು, ಆತ ನನ್ನ ಅಳಿಯ. ಚಾಸಾ 1 ನನ್ನ ಗಂಡ. ಚಾಸಾ 3 ಮತ್ತು 4 ರವರು ನನ್ನ ಮಕ್ಕಳು. ಚಾಸಾ 5 ರವರು ಗೊತ್ತು, ಅವರು ಆರೋಪಿಯ ಮನೆಯ ಹತ್ತಿರ ವಾಸವಾಗಿದ್ದಾರೆ. 2 ನೇ ಆರೋಪಿತ ಹೊನ್ನಯ್ಯ ಗೊತ್ತು, ಆತ 1 ನೇ ಆರೋಪಿಯ ತಂದೆ. (ಈ ದಿವಸ 2 ನೇ ಆರೋಪಿತ ಗೈರು ಹಾಜರಾಗಿದ್ದು, ಅವರ ಪರ ವಕೀಲರು ಸಲ್ಲಿಸಿದ ವಿನಾಯಿತಿ ಕೋರಿದ ಅರ್ಜಿಯನ್ನು ನ್ಯಾಯಾಲಯ ಪುರಸ್ಕರಿಸಿರುತ್ತದೆ).

ನನ್ನ ಮಗಳ ಹೆಸರು ಮಾಲಿನಿ. ಆಕೆಗೆ ಮದುವೆಯಾಗಿ 8 ವರುಷಗಳು ಆಗಿತ್ತು. ಈಗ ಆಕೆ ತೀರಿಕೊಂಡಿದ್ದಾಳೆ. ಆಕೆ ತೀರಿಕೊಂಡು 2 ವರುಷಗಳು ಆಗಿವೆ. ನನ್ನ ಮಗಳ ಮದುವೆ ಮಾತುಕತೆ ನಮ್ಮ ಮನೆಯಲ್ಲಿ ನಡೆದಿತ್ತು. ಯಾರೋ ಒಬ್ಬರು ಕರೆದುಕೊಂಡು ಬಂದು, ಮದುವೆಗೆ ಎಂದು 1 ನೇ ಆರೋಪಿಯನ್ನು ನಮಗೆ ತೋರಿಸಿದ್ದರು. ನನ್ನ ಮಗಳನು 1 ನೇ ಆರೋಪಿಗೆ ಮದುವೆ ಮಾಡಿಕೊಡುತ್ತೇವೆ ಎಂಬ ಮದುವೆಯ ಮಾತುಕತೆ ಆಗುವುದಕ್ಕೆ ಮುಂಚೆ, ಗಂಡನ ಮನೆಯವರು ನಮ್ಮ ಮನೆಗೆ 3 ಸಲ ಬಂದು ಹೋಗಿದ್ದರು. ಆರೋಪಿತರಿಬ್ಬರು ನಮ್ಮ ಮನೆಗೆ ಬಂದು ಹೋಗಿದ್ದರು. ನಮ್ಮ ಮನೆಯಲ್ಲಿ ನಡೆದ ಮದುವೆ ಮಾತುಕತೆಗೆ, ಗಂಡನ ಮನೆ ಕಡೆಯಿಂದ, 1 ಮತ್ತು 2 ನೇ ಆರೋಪಿತರು, ಅವರ ಸೋದರ ಮಾವ ಮತ್ತು ಅವರ ದೊಡ್ಡಮ್ಮ ನಮ್ಮ ಮನೆಗೆ ಬಂದಿದ್ದರು. ಹುಡುಗಿ ಕಡೆಯಿಂದ ನಾನು, ನನ್ನ ಗಂಡ ಮತ್ತು ನಮ್ಮ ಊರಿನ ಯಜಮಾನರು ಇದ್ದೆವು. ಮಾತುಕತೆಯಲ್ಲಿ ಗಂಡನ ಕಡೆಯವರು ಒಂದು ಚಿನ್ನದ ಉಂಗುರ, ಚಿನ್ನದ ಬ್ರಾಸ್ಲೈಟ್, ಒಂದು

ಚಿನ್ನದ ಸರ, 1 ಲಕ್ಷ ದುಡ್ಡು ಮತ್ತು ಛತ್ರದಲ್ಲಿ ಮದುವೆ ಮಾಡಿಕೊಡಿ ಎಂದು ಕೇಳಿದ್ದರು. ನಾವು ಅಷ್ಟು ಕೊಡಲು ಆಗುವುದಿಲ್ಲ, ಛತ್ರದಲ್ಲಿ ಮದುವೆ ಮಾಡಿಕೊಡುತ್ತೇವೆ, ಒಂದು ಚಿನ್ನದ ಉಂಗುರ ಕೊಡುತ್ತೇವೆ ಎಂದು ಹೇಳಿದ್ದೆವು. ದುಡ್ಡನ್ನು ಮದುವೆಯಾದ ಮೇಲೆ ಕೊಡುತ್ತೇವೆ ಎಂದು ಹೇಳಿದ್ದೆವು. ಗಂಡಿನ ಕಡೆಯವರಗೆ ಒಂದು ಉಂಗುರ ಮತ್ತು ಒಂದು ಸರವನ್ನು ಮಾಡಿಸಿಕೊಟ್ಟೆವು.

ಮದುವೆಯ ನಂತರ ನನ್ನ ಮಗಳು ವಡ್ಡರಹಳ್ಳಿಯಲ್ಲಿ ಆರೋಪಿತರ ಮನೆಯಲ್ಲಿ ವಾಸವಾಗಿದ್ದಳು. ನನ್ನ ಮಗಳು ಮದುವೆಯಾಗಿ ಗಂಡನ ಮನೆಗೆ ಹೋದಾಗ ಅವರ ಮನೆಯಲ್ಲಿ 1 ನೇ ಆರೋಪಿತ, 2 ನೇ ಆರೋಪಿತ ಮತ್ತು 1 ನೇ ಆರೋಪಿಯ ದೊಡ್ಡಮ್ಮ ಇದ್ದರು. ನನ್ನ ಮಗಳು ಮದುವೆಯಾಗುವ ಕಾಲಕ್ಕೆ, 1 ನೇ ಆರೋಪಿತನ ತಾಯಿ ತೀರಿಕೊಂಡು 8 ವರುಷಗಳು ಆಗಿತ್ತು. ನನ್ನ ಮಗಳಿಗೆ ಇಬ್ಬರು ಗಂಡು ಮಕ್ಕಳು ಹುಟ್ಟಿದ್ದರು. ಮದುವೆಯಾದ 2 ವರುಷಗಳ ಕಾಲ ನನ್ನ ಮಗಳನ್ನು, ಗಂಡನ ಮನೆಯವರು ಚೆನ್ನಾಗಿ ನೋಡಿಕೊಂಡಿದ್ದರು. 3 ವರುಷ ಆದ ಮೇಲೆ 2 ನೇ ಮಗು ಹುಟ್ಟಿತು, 2 ನೇ ಮಗು ಹುಟ್ಟುವುದಕ್ಕೆ ಮುಂಚೆ ಜಗಳ ಶುರುವಾಯಿತು. ನನ್ನ ಮಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತಿರಲಿಲ್ಲ, ಆಗ 2 ನೇ ಆರೋಪಿಗೆ, ಯಾಕೆ ನನ್ನ ಮಗಳನ್ನು ಚೆನ್ನಾಗಿ ನೋಡಿಕೊಳುತ್ತಿಲ್ಲ, ಯಾಕೆ ಕಿರುಕುಳ ಕೊಡುತ್ತೀರಾ ಎಂದು ಕೇಳಿದ್ದಕ್ಕೆ, 2 ನೇ ಆರೋಪಿತ, ನಿನ್ನ ಮಗಳು ಏನು ಒತ್ತಿಕೊಂಡು ಬಂದು ಬಿಟ್ಟಿದ್ದಾಳಾ, ನಾವು ಕಿರುಕುಳವನ್ನು ಕೊಡುವುದೇ, ಬಾಳಿಸಿದರೆ ಬಾಳಿಸಿ ಇಲ್ಲವಾದರೆ ಕರೆದುಕೊಂಡು ಹೋಗಿ ಎಂದರು. ಆಗ ನಾನು ಬಾಳಿಸುವುದಕ್ಕೆ ಮಗಳನ್ನು ಕೊಟ್ಟಿರುವುದು, ಕರೆದುಕೊಂಡು ಹೋಗುವುದಕ್ಕೆ ಅಲ್ಲ ಎಂದು ಹೇಳಿದೆನು. 1 ಮತ್ತು 2 ನೇ ಆರೋಪಿತರು, ಬಾಕಿ ವರದಕ್ಷಿಣೆಯನ್ನು ತರುವಂತೆ ನನ್ನ ಮಗಳಿಗೆ ಹಿಂಸೆ ಕಿರುಕುಳವನ್ನು ಕೊಡುತ್ತಿದ್ದುರಿಂದ, ನಾನು 50 ಸಾವಿರ ರೂ. ಹಣವನ್ನು ತೆಗೆದುಕೊಂಡು ಹೋಗಿ ಕೊಟ್ಟಿದ್ದೆನು. 50 ಸಾವಿರ ಜೊತೆಗೆ ಒಂದು ಚಿನ್ನದ ಉಂಗುರವನ್ನು ಕೊಟ್ಟಿದ್ದೆನು. 50 ಸಾವಿರ ಹಣ, ನನ್ನ ತಂದೆ ಮನೆಯಿಂದ ನನಗೆ ಬಂದಿತ್ತು. ನಾನು ಮತ್ತು ಮಹದೇವಸ್ವಾಮಿ ಜೊತೆಯಲ್ಲಿ ಹೋಗಿ 50 ಸಾವಿರ ನಗದು ಹಣ ಮತ್ತು ಒಂದು ಚಿನ್ನದ ಉಂಗುರವನ್ನು ಆರೋಪಿಗೆ ಕೊಟ್ಟು ಬಂದಿದ್ದೆವು. ಆರೋಪಿತರು ಕಿರುಕುಳ ಕೊಡುತ್ತಿದ್ದ ವಿಚಾರವನ್ನು ನನಗೆ ನನ್ನ ಮಗಳು ಫೋನ್ ಮಾಡಿ ಹೇಳುತ್ತಿದ್ದಳು, ನಾನು ಕೂಡ ಆಗಾಗ ಮಗಳ ಮನೆಗೆ ಹೋದಾಗ, ಕಿರುಕುಳ ಕೊಡುತ್ತಿದ್ದುದನ್ನು ನನಗೆ ಹೇಳುತ್ತಿದ್ದಳು. 2 ನೇ ಆರೋಪಿಗೆ, ನನ್ನ ಮಗಳಿಗೆ ಕಿರುಕುಳ, ತೊಂದರೆ ಕೊಡಬೇಡಿ, ಬಾಳಿಸಿದರೆ ಬಾಳಿಸಿ, ಇಲ್ಲದಿದ್ದರೆ ನಮ್ಮ ಮಗಳನ್ನು ನಮ್ಮ ಮನೆಗೆ ಕರೆದುಕೊಂಡು ಬರುವುದಾಗಿ ಹೇಳಿದೆನು. 2 ನೇ ಆರೋಪಿಯ ಕಾಲನ್ನು ಸಹ ಕಟ್ಟಿಕೊಂಡೆನು. ಪಂಚಾಯ್ತಿಯನ್ನು ಮಾಡಿಸಬೇಕು ಎಂದುಕೊಂಡೆವು, ಆದರೆ ಮಾನ ಮಾರ್ಯಾದೆ ಹೋಗುತ್ತದೆ ಮತ್ತು ಆರೋಪಿತರು ನನ್ನ ಮಗಳನ್ನು

ಬಾಳಿಸದೇ, ಕಳುಹಿಸಿಬಿಡುತ್ತಾರೆ ಎಂಬ ಹೆದರಿಕೆಗೆ, ಪಂಚಾಯ್ತಿಯನ್ನು ಮಾಡಿಸಲಿಲ್ಲ. ನನ್ನ ಮಗಳನ್ನು, 1 ಮತ್ತು 2 ನೇ ಆರೋಪಿತರು ಹಿಂಸೆ ಕೊಟ್ಟು ಹೊಡೆದು, ಸಾಯಿಸಿ ನೇಣು ಹಾಕಿದ್ದಾರೆ.

ನನ್ನ ಮಗಳು ಸಾಯುವುದಕ್ಕಿಂತ ಮುಂಚೆ, ಗುರುವಾರ ರಾತ್ರಿ ನನಗೆ ಫೋನ್ ಮಾಡಿ, ನನಗೆ ಚೆನ್ನಾಗಿ ಹೊಡೆದು ಹಿಂಸೆ ಕೊಡುತ್ತಿದ್ದಾರೆ, ಬಾಳನ್ನು ಆಗುತ್ತಿಲ್ಲ, ಬನ್ನಿ ಎಂದು ಹೇಳಿದಳು. ಮರುದಿವಸ ಬೆಳಿಗ್ಗ 6.00 ಗಂಟೆಯಿಲ್ಲಿ ಮತ್ತೆ ನನ್ನ ಮಗಳು ಚಾಸಾ 1 ರವರಿಗೆ ಫೋನ್ ಮಾಡಿ, ನನಗೆ ಬಾಳಲು ಆಗುತ್ತಿಲ್ಲ, ಹಿಂಸೆ ಕೊಡುತ್ತಿದ್ದಾರೆ, ಬಂದು ಕರೆದುಕೊಂಡು ಹೋಗಿ ಎಂದು ಹೇಳಿದಳು. ಆಗ ಚಾಸಾ 1 ರವರು ಹೋಗಲು ತಯಾಗಿದ್ದರು, ನಾನು ಗಂಡನಿಗೆ ಹೋಗಬೇಡಿ , ನಾನು ಹೋಗುತ್ತೇನೆ ಎಂದೆನು. ನಾನೇ ಹೋಗುತ್ತೇನೆ ಎಂದು ಯಾಕೆ ಹೇಳಿದೆ ಎಂದರೆ, 1 ನೇ ಆರೋಪಿತ ನನ್ನ ಗಂಡನಿಗೆ ಮಗಳ ಮಾತನ್ನು ಕೇಳಿಕೊಂಡು ಬರಬೇಡಿ ಎಂದು ಹೇಳಿದ್ದನು, ಮಗಳನ್ನು ಬಾಳಿಸುವುದಕ್ಕೆ ಕೊಟ್ಟಿರುವುದು, ನೀವು ಹೋದರೆ ಜಗಳ ಆಗುತ್ತದೆ, ಅದಕ್ಕೆ ನಾನು ಚಾಸಾ 1 ರವರಿಗೆ ಹೋಗಬೇಡಿ ಎಂದು ಹೇಳಿದ್ದೆನು. ನಾನು ಮತ್ತು ನನ್ನ ಚಿಕ್ಕ ಮಗ ಚಾಸಾ 4 ರವರು ಬೆಳಿಗ್ಗೆ 10.00 ಕ್ಕೆ ಆರೋಪಿತರ ಮನೆಗೆ ಹೋದಾಗ 2 ನೇ ಆರೋಪಿತ ಇದ್ದರು. 2 ನೇ ಆರೋಪಿತನೊಂದಿಗೆ ಮಾತನಾಡಿದೆನು. 2 ನೇ ಆರೋಪಿತ, ನನ್ನ ಮಗನಿಗೆ (1 ನೇ ಆರೋಪಿತ) ಬುದ್ದಿ ಹೇಳುತ್ತೇನೆ , ನೀವು ಹೋಗಿ ಎಂದು ಹೇಳಿದರು. ಆಗ ಆರೋಪಿತರ ಮನೆಯಿಂದ ನಾನು ಇಬ್ಬರು ಮೊಮ್ಮಕ್ಕಳನ್ನು ಕರೆದುಕೊಂಡು ಚಾಸಾ 4 ರವರೊಂದಿಗೆ ನಮ್ಮ ಮನೆಗೆ ಬಂದೆನು. ನನ್ನ ಮಗಳು ಮತ್ತು 1 ನೇ ಆರೋಪಿತ, ಇಬ್ಬರೂ ಮೊಮ್ಮಕ್ಕಳನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ಎಂದು ನನಗ ಹೇಳಿದರು. ಅದಕ್ಕೆ ನಾನು ಅವರನ್ನು ನನ್ನೊಂದಿಗೆ ಕರೆದುಕೊಂಡು ಬಂದೆನು. 1 ನೇ ಆರೋಪಿತ, ನನ್ನ ಮಗಳನ್ನು ಭಾನುವಾರ ಕರೆದುಕೊಂಡು ಬರುತ್ತೇನೆ ಎಂದು ಹೇಳಿದರು. ಶುಕ್ರವಾರದಂದು ನಾನು ನನ್ನ ಮೊಮ್ಮಕ್ಕಳನ್ನು ಕರೆದುಕೊಂಡು ಬಂದಿದ್ದೆನು. ಭಾನುವಾರದ ದಿನ 1 ನೇ ಆರೋಪಿತ ನನ್ನ ಮಗಳನ್ನು ಕರೆದುಕೊಂಡು ಬರಲಿಲ್ಲ. ಭಾನುವಾರ ಮಧ್ಯಾಹ್ನ 12.00 ಗಂಟೆಗೆ 1 ನೇ ಆರೋಪಿತ ಚಾಸಾ 1 ರವರಿಗೆ ಫೋನ್ ಮಾಡಿ, ನಿಮ್ಮ ಮಗಳು ನೇಣು ಬಿಗಿದುಕೊಂಡಿದ್ದಾಳೆ, ಅವಳು ಮಳವಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ಇದ್ದಾಳೆ ಎಂದು ಎಂದು ತಿಳಿಸಿದನು. ನಾನು ಮತ್ತು ಚಾಸಾ 1 ರವರು ಇಬ್ಬರೂ ಮೊಮ್ಮಕ್ಕಳೊಂದಿಗೆ ಮಳವಳ್ಳಿ ಸರ್ಕಾರಿ ಆಸ್ಪತ್ರೆಗೆ ಮ. 3.00 ಕ್ಕೆ ಹೋದೆವು. ಅಲ್ಲಿ ಮಗಳ ಹೆಣವನ್ನು ನೋಡಿದೆವು. ನನ್ನ ಮಗಳ ಎಡ ಮುಂಗೈ ಅಂದರೆ ಮಣಿಕಟ್ಟು ನೀಲಿಕಟ್ಟಿತ್ತು, ಬಲ ತೊಡೆ ನೀಲಿಗಟ್ಟಿತ್ತು, ಆಕೆಗೆ ಚೆನ್ನಾಗಿ ಹೊಡೆದಿದ್ದರು, ಮೈಮೇಲೆಲ್ಲಾ ನೀಲಿಕಟ್ಟಿತ್ತು. ಆಸ್ಪತ್ರೆಯಲ್ಲಿ

ಆರೋಪಿಯ ಪಕ್ಕದ ಮನೆಯವರು ಸಿಕ್ಕಿದ್ದರು. ಅವರನ್ನು ವಿಚಾರಿಸಿದಾಗ, ರಾತ್ರಿ ಜಗಳವಾಗಿ ನಿಮ್ಮ ಮಗಳು ತುಂಬಾ ಕಿರುಚಾಡುತ್ತಿದ್ದಳು, ನಾವು ಹೋಗಿ ಜಗಳ ಬಿಡಿಸಿದೆವು, ಮಾರನೆಯ ದಿನ ಭಾನುವಾರ ನಿಮ್ಮ ಮಗಳು ಅವರ ಮನೆಯ ಬಾಗಿಲಲ್ಲಿ ಕಸ ಗುಡಿಸುತ್ತಿದ್ದಾಗ, ಯಾಕೆ ಮನೆಯಲ್ಲಿ ನಿಮ್ಮ ಮನೆಯಲ್ಲಿ ಕಿರುಚಾಡುತ್ತಿದ್ದೆ ಎಂದು ಕೇಳಿದಾಗ, ಅದಕ್ಕೆ ನನ್ನ ಮಗಳು ರಾತ್ರಿ ಜಗಳವಾಯಿತು ಎಂದು ಹೇಳಿದ್ದಳು. ಅದೇ ದಿನ ಭಾನುವಾರ ಬೆಳಿಗ್ಗೆ ನನ್ನ ಮಗಳು ಒಂದು ಬೇಸಿನ್ ತುಂಬಾ ಇದ್ದ ಬಟ್ಟೆಯನ್ನು ಹೊಗೆಯುತ್ತಿದ್ದುದನ್ನು ಪಕ್ಕದ ಮನೆಯವರು ನೋಡಿದ್ದಾಗಿ ನನಗೆ ಹೇಳಿದರು. ಬಟ್ಟೆ ಹೊಗೆಯುತ್ತಿದ್ದ ನಿಮ್ಮ ಮಗಳು ಒಳಗೆ ಹೋದಳು, ಪುನಃ ಕಿರುಚಾಡುತ್ತಿದ್ದಳು, ಆಗ ಹೊಡೆದು ನೇಣು ಹಾಕಿದ್ದಾರೆ ಎಂದು ಪಕ್ಕದ ಮನೆಯವರು ನನಗೆ ಹೇಳಿದರು. ನನ್ನ ಮಗಳಿಗೆ ಆರೋಪಿತರ ಮನೆಯವರು ವರದಕ್ಷಿಣೆ ಕಿರುಕುಳವನ್ನು ನೀಡಿ ಆಕೆಗೆ ಹೊಡೆದು ನೇತು ಹಾಕಿದ್ದಾರೆ.

ಪೊಲೀಸರು ನನ್ನನ್ನು ವಿಚಾರಿಸಿದ್ದಾರೆ, ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಸಮಯ ಕೋರಿದ್ದು, ಯಾವುದೇ ಸಕಾರಣ ಹಾಗೂ ತೃಪ್ತಿಕಾರವಾದ ಕಾರಣವನ್ನು ನೀಡಿರುವುದಿಲ್ಲ, ಆದ್ದರಿಂದ ಕೋರಿಕೆಯನ್ನು ತಿರಸ್ಕರಿಸಿ ಪಾಟೀ ಸವಾಲನ್ನು ಏನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.</u>

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.